

ರಾಣಿ ರೂಪಮತಿಯ ಅರಮನೆ



ಅಪೂರ್ವ ಪ್ರೇಮಕಥೆ ಉಸುರುವಂತಿರುವ ನರ್ಮದಾ ನದಿ




1957ರಲ್ಲಿ ತೆರೆಕಂಡ 'ರಾಣಿರೂಪಮತಿ' ಹಿಂದಿ ಚಲನಚಿತ್ರದ ಪೋಸ್ಟರ್

ವಿಚಾರವೂ ತಿಳಿಯಿತು. ಮಾಂಡುವಿನಲ್ಲಿ ರಾಣಿ ರೂಪಮತಿಯ ಸಮಾಧಿಯ ಬಳಿ, ಬಾಜ್‌ಬಹಾದ್ದೂರನ ಸಮಾಧಿಯನ್ನೂ ನಿರ್ಮಿಸಿದ. ಅಪೂರ್ವ ಜೋಡಿಯ ಸಾವಿಗೆ ತಾನೇ ಕಾರಣನೆಂದು ತಿಳಿದು ಬಹು ಪಶ್ಚಾತ್ತಾಪ ಪಟ್ಟ. ಬಾಜ್‌ಬಹಾದ್ದೂರನ ಸಮಾಧಿಯ ಮೇಲೆ, 'ಆಶಿ ಎ ಸಾದಿಕ್' (ಪ್ರಾಮಾಣಿಕ ಪತ್ನಿಪ್ರೇಮಿ) ಹಾಗೂ ರಾಣಿ ರೂಪಮತಿಯ ಸಮಾಧಿಯ ಮೇಲೆ, 'ಶಹೀದ್ ಎ ವಫಾ' (ನಂಬಿಗಸ್ಥ ಹುತಾತ್ಮಳು) ಎಂದು ಬರೆಸಿದ.

ರಾಣಿ ರೂಪಮತಿ ಹಾಗೂ ಬಾಜ್‌ಬಹಾದ್ದೂರನ ಅಮರ ಪ್ರೇಮಕಥೆ 'ರಾಣಿ ರೂಪಮತಿ' ಹೆಸರಿನಲ್ಲಿ 1957ರಲ್ಲಿ ಚಲನಚಿತ್ರದ ರೂಪು ತಾಳಿ, ಜನಪ್ರಿಯವೂ ಆಯಿತು.

ಪ್ರಸ್ತುತ ಮಾಂಡು ಮಧ್ಯಪ್ರದೇಶದ ಜನಪ್ರಿಯ ಪ್ರವಾಸಿ ಕ್ಷೇತ್ರಗಳಲ್ಲೊಂದು. ದೇಶದ ಅನನ್ಯ ಪ್ರೇಮಸ್ಮಾರಕಗಳ ಪೈಕಿ ಮಾಂಡುವನ್ನು ಮರೆಯುವಂತಿಲ್ಲ. ನರ್ಮದಾ ನದಿಯೇ ತಾನು ಕಂಡ ಅಮರಪ್ರೇಮಿಗಳ ಕಥೆಯನ್ನು ಸಹೃದಯರಿಗೆ ಉಲಿಯುವಂತೆ ಭಾಸವಾಗುತ್ತದೆ. ಅಲ್ಲಿಗೆ ಬಂದವರೆಲ್ಲ ಸುಲ್ತಾನ ಮತ್ತು ರೂಪಮತಿಯ ಕಥೆಯನ್ನು ಕೇಳಿ ವಿಷಣ್ಣರಾಗುತ್ತಾರೆ. ಅಮರಪ್ರೇಮದ ಮುಂದೆ ಬಲಶಾಲಿ ಚಕ್ರವರ್ತಿ ತಲೆಬಾಗಿದ್ದೂ ವಿಶೇಷವೇ. ಮಧ್ಯಪ್ರದೇಶಕ್ಕೆ ಹೋದಲ್ಲಿ ಮಾಂಡುವಿಗೆ ಭೇಟಿ ಕೊಡುವುದನ್ನು ಮರೆಯಬೇಡಿ. ಅದು ಪ್ರೇಮಿಗಳ ಸ್ಮಾರಕದ ತಾಣವಷ್ಟೇ ಅಲ್ಲ; ಅಕ್ಬರದ ಮನಸ್ಸಿಗೆ ಕವಿದ ಪೊರೆಯನ್ನು ಹರಿದು, ಮಾನವೀಯತೆಯ ಕಣ್ಣು ತೆರೆಸಿದ ಅಪರೂಪದ ದೃಷ್ಟಾಂತವೂ ಹೌದು. ■